| | |
|---|---|
| **ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.** | |
| **ಸಿ.ಸಿ. ನಂ.1/2021** | |
| **ಚಾಸಾ - 17** | |
| **ಪ್ರಾಸಾ - 14** | |
| **ಸಾಕ್ಷಿದಾರರ ಹೆಸರು** | **ಕಾರ್ತಿಕೇಯನ್.ಸಿ** |
| **ತಂದೆ/ಗಂಡ/ತಾಯಿ ಹೆಸರು** | **ಚಿನ್ನಯ್ಯನ್** |
| **ವಯಸ್ಸು** | **44 ವರ್ಷ** |
| **ಉದ್ಯೋಗ** | **ಮ್ಯಾನೇಜರ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮುಂಬೈ** |
| **ವಾಸಸ್ಥಳ** | **ಮುಂಬೈ** |

**ಸಾಕ್ಷಿಯನ್ನು ದಿನಾಂಕಃ-03.01.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-**

ನಾನು 2016 ರಿಂದ 2018 ರವರೆಗೆ ಜಮಖಂಡಿ ಎಸ್.ಬಿ.ಐ ಪ್ರಧಾನ ಶಾಖೆಯಲ್ಲಿ ಮ್ಯಾನೇಜರ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ಈ ಕೇಸಿಗೆ ಸಂಬಂಧಪಟ್ಟಂತೆ 2 ಚೆಕ್‌ಗಳು ನಮ್ಮ ಬ್ಯಾಂಕಿಗೆ ನಗದೀಕರಣಕ್ಕಾಗಿ ಬಂದಿದ್ದವು. ಟ್ರಸರಿ ಕಚೇರಿಯಿಂದ ಸದರಿ ಚೆಕಗಳ ಮಂಜೂರಾತಿಗಾಗಿ ಬಂದಿದ್ದು, ಅದರೊಂದಿಗೆ ಪಟ್ಟಿಯೂ ಸಹ ಬಂದಿತ್ತು. ಅದರ ಪ್ರಕಾರ ಅವರವರ ಹೆಸರಿಗೆ ಜಮಾ ಮಾಡಿರುತ್ತೇನೆ. ಪೋಲೀಸರು ಮಾಹಿತಿ ಕೇಳಿದ್ದರ ಮೇರೆಗೆ 2 ಚಲನ್‌ಗಳನ್ನು ಕೊಟ್ಟಿದ್ದೇನೆ. 2 ಚಲನ್‌ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಯಿತು. ಯಾವ ತಾರೀಖಿನಂದು ಖಾತೆಗೆ ಜಮಾ ಮಾಡಿದ್ದೇವೆ ಎಂದು ತೋರಿಸುವ 11 ಸ್ಟೇಟ್‌ಮೆಂಟನ್ನು ಪೋಲೀಸರಿಗೆ ಕೊಟ್ಟಿದ್ದೇನೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ನಿಪಿ-12 ರಿಂದ ನಿಪಿ-22 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ-** ಆರೋಪಿ ಪರ ವಕೀಲರು ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

ಸಾಕ್ಷಿಯ ಸಹಿ

| | |
|---|---|
| **ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.** | |
| ಸಿ.ಸಿ. ನಂ.**1/2021** | |
| ಚಾಸಾ - **20** | |
| ಪ್ರಾಸಾ - **15** | |
| ಸಾಕ್ಷಿದಾರರ ಹೆಸರು | ಮೇ. ಸಿದ್ದಲಿಂಗಯ್ಯ ಹಿರೇಮಠ |
| ತಂದೆ/ಗಂಡ/ತಾಯಿ ಹೆಸರು | ಶಿವಯ್ಯ |
| ವಯಸ್ಸು | **45** ವರ್ಷ |
| ಉದ್ಯೋಗ | ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ನಗರ ಮೂಲ ಸೌಕರ್ಯ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನಿಯಮಿತ, ಪ್ರಾದೇಶಿಕ ಕಚೇರಿ ಹುಬ್ಬಳ್ಳಿ. |
| ವಾಸಸ್ಥಳ | ಹುಬ್ಬಳ್ಳಿ |

**ಸಾಕ್ಷಿಯನ್ನು ದಿನಾಂಕಃ-03.01.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-

ನಾನು 2018 ರಿಂದ 2021 ರವರೆಗೆ ಅಪರಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. 2019 ರಲ್ಲಿ ಪೋಲೀಸ ಆಯುಕ್ತರು ಆರಕ್ಷಕ ಉಪ ನಿರೀಕ್ಷಕರು ನಗರ ಠಾಣೆ ಜಮಖಂಡಿ ಇವರು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲು ಅನುಮತಿ ಕೋರಿ ಪತ್ರವನ್ನು ಬರೆದಿದ್ದರು. ಆರೋಪಿತನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು, ಸದರಿಯವರು ಹಣ ದುರುಪಯೋಗ ಪಡಿಸಿಕೊಂಡು ಮೋಸ ಮಾಡಿದ್ದು ಹಾಗೂ ಖೊಟ್ಟಿ ಪ್ರಮಾಣ ಪತ್ರಗಳನ್ನು ತಯಾರಿಸಿದ್ದರ ಕುರಿತಂತೆ ದೋಷಾರೋಪಣೆ ಪಟ್ಟಿ ಸಲ್ಲಿಸಲು ದಿನಾಂಕ 07.09.2019 ರಂದು ಅನುಮತಿಯನ್ನು ನೀಡಿದ್ದೇನೆ. ಅನುಮತಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-23 ಎಂದು ಸಾಕ್ಷಿ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ವಕೀಲರು ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಸಾಕ್ಷಿಯ ಸಹಿ

ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.